ಓ ಎಸ್ ನಂಃ 76/2018
ಡಿ.ಡಬ್ಲ್ಯೂ -3
ದಿನಾಂಕಃ 10.12.2025.

<u>ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ನ್ಯಾಯಾಲಯದ ಅನುಮತಿಯ ಮೇರೆಗೆ ಪಾಟೀ ಸವಾಲುಃ ಪ್ರತಿವಾದಿ 2 ರಿಂದ 5 ರವರ ಪರವಾಗಿ ಶ್ರೀ ಈ ಟಿ ಆರ್ ವಕೀಲರಿಂದಃ</u>

ನನ್ನ ತಂದೆ ಈಶ್ವರ ಶೆಟ್ಟಿ. ನನ್ನ ತಂದೆಯ ತಂಗಿಯ ಹೆಸರು ವಾಸಮ್ಮ ಎಂದರೆ ಸರಿ. ವಾಸಮ್ಮನಿಗೆ 2 ಗಂಡು ಮತ್ತು 4 ಜನ ಹೆಣ್ಣು ಮಕ್ಕಳು. ಅವರ ಹೆಸರು ಸುರೇಶ್ ಬಾಬು, ನಾಗರಾಜ ಶೆಟ್ಟಿ , ಬೇಬಿ, ಸೀತಾಲಕ್ಷ್ಮಿ , ಇನ್ನು ಇಬ್ಬರ ಹೆಸರು ನನಗೆ ನೆನಪಿಲ್ಲ. 1 ನೇ ಪ್ರತಿವಾದಿಯು ವಾಸಮ್ಮನ ಪರವಾಗಿ ನನ್ನ ವಿರುದ್ದ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ನಾಗರತ್ನಮ್ಮ ರವರು ನಾಗರಾಜ್ ಶೆಟ್ರು ಅವರನ್ನು ಮದುವೆಯಾಗಿರುವ ವಿಚಾರ ನನಗೆ ಖುದ್ದು ಗೊತ್ತಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರೆದು ನಾನು ಆಗ ಚಿಕ್ಕವನಿದ್ದು ನನ್ನ ತಂದೆಯವರು ಹೇಳಿರುತ್ತಾರೆ. ನಾಗರತ್ನಮ್ಮ ತಂದೆಯ ಹೆಸರು ನನಗೆ ಗೊತ್ತಿಲ್ಲ. ನಾಗರತ್ನಮ್ಮ ರವರ ಮೂಲ ಚಿನ್ನಕಟ್ಟೆ ಗ್ರಾಮ ಎಂದರೆ ಸಾಕ್ಷಿಯು ಚಿನ್ನಕಟ್ಟೆಯ ಸಮೀಪ ಇರುವ ಶೀರನಕಟ್ಟೆ ಆಗಿರುತ್ತದೆ ಎಂದು ನುಡಿದಿರುತ್ತಾರೆ. ನಾಗರತ್ನಮ್ಮ ರವರನ್ನು ಕ್ಯಾದಿಗೆರೆ ಗ್ರಾಮದ ತಿಮ್ಮಪ್ಪ ತಂದೆ ಮಾರಪ್ಪ ಇವರಿಗೆ ನೀಡಿ ವಿವಾಹ ಮಾಡಲಾಗಿರುತ್ತದೆ ಎಂದರೆ ಸುಳ್ಳು. ನಾಗರತ್ನಮ್ಮ ರವರನ್ನು ನಾಗರಾಜ್ ಶೆಟ್ರು ರವರು ಕಾನೂನು ಬದ್ದವಾಗಿ ವಿವಾಹವಾಗಿರುವುದಿಲ್ಲ ಎಂದರೆ

ಸರಿಯಲ್ಲ . ನಾಗರತ್ನಮ್ಮ ರವರು ಅವರ ಮೊದಲ ಗಂಡನಾದ ತಿಮ್ಮಪ್ಪ ನವರಿಂದ ವಿಚ್ಛೇದನವನ್ನು ಪಡೆದುಕೊಂಡಿರಲಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ . ನಾವು ಅರ್ಯ ವೈಶ್ಯ ಜನಾಂಗದವರು . ನಾಗರತ್ನಮ್ಮ ಯಾವ ಜನಾಂಗ ಎಂದು ನನಗೆ ಗೊತ್ತಿಲ್ಲ. ಅವರು ನಾಯಕ ಜನಾಂಗ ಎಂದರೆ ನನಗೆ ಗೊತ್ತಿಲ್ಲ. ನಾಗರಾಜ್ ಶೆಟ್ರು ರವರು ನಾಗರತ್ನಮ್ಮ ರವರನ್ನು ವಿವಾಹ ಆಗಿರಲಿಲ್ಲ ಎಂದರೆ ಸರಿಯಲ್ಲ . 1 ನೇ ಪ್ರತಿವಾದಿಯು ನನ್ನ ವಿರುದ್ಧ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಸುಳ್ಳು ದಾವೆಯನ್ನು ಸಲ್ಲಿಸಿರುವ ಕಾರಣ ಆ ದ್ವೇಷದಿಂದ ನಾಗರತ್ನಮ್ಮ ರವರನ್ನು ಬಳಸಿಕೊಂಡು ಸುಳ್ಳು ದಾವೆಯನ್ನು ಈ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾಗರಾಜ್ ಶೆಟ್ರು ರವರು ಮದುವೆಯಾಗದೇ ಮರಣ ಹೊಂದಿರುತ್ತಾರೆ ಎಂದರೆ ಸರಿಯಲ್ಲ.

ದಾವಾ 1 ನೇ ಸ್ವತ್ತು ವಾಸಮ್ಮ ನವರ ಸ್ವತ್ತು ಎಂದರೆ ಸರಿ . ಸಾಕ್ಷಿಯು ಮುಂದುವರೆದು ಅದು ನನ್ನ ತಂದೆ ಈಶ್ವರಶೆಟ್ರು ವಾಸಮ್ಮ ರವರಿಗೆ ದಾನ ನೀಡಿರುತ್ತಾರೆ. 2 ನೇ ದಾವಾ ಸ್ವತ್ತು ಸಹ ವಾಸಮ್ಮ ನವರಿಗೆ ದಾನದ ಮೂಲಕ ಬಂದಿರುತ್ತದೆ ಎಂದರೆ ಸಾಕ್ಷಿ, ದಾನದ ಮೂಲಕ ಬಂದಿರುತ್ತದೆ ಅದನ್ನು ನನ್ನ ಅಜ್ಜ ದಾನ ನೀಡಿರುತ್ತಾರೆ ಎಂದು ನುಡಿದಿರುತ್ತಾರೆ . ದಾವಾ ಸ್ವತ್ತುಗಳು ವಾಸಮ್ಮನವರಿಗೆ ದಾನದ ಮೂಲಕ ಬಂದಿರುವುದರಿಂದ ಅದು ಅವರ ಸ್ವಯಾರ್ಜಿತವಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ವಾಸಮ್ಮ ನವರಿಗೆ ದಾನದ ಮೂಲಕ ಬಂದ ಕಾರಣ 1 ನೇ ಪ್ರತಿವಾದಿಗೆ ನೀಡಿರುತ್ತಾರೆ ಆದ ಕಾರಣ ನಿಮಗಾಗಲೀ ಅಥವಾ ವಾದಿಯರಿಗಾಗಲೀ ಯಾವುದೇ ಹಕ್ಕು ಇರುವುದಿಲ್ಲ ಸಾಕ್ಷಿಯು ನನಗೆ ಯಾವುದೇ ಹಕ್ಕು ಇರುವುದಿಲ್ಲ ಆದರೆ ವಾದಿಯರಿಗೆ ಇರುತ್ತದೆ ಎಂದು ನುಡಿದಿರುತ್ತಾರೆ. ವಾದಿಯರಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ . ವಾದಿಯರಿಗೆ ಅನುಕೂಲ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

<u>ಮರು ವಿಚಾರಣೆಃ ಇಲ್ಲ.</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ**

**ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ**
**ನಾಯ್ಯಾಧೀಶರು, ಹೊಸದುರ್ಗ.**

**ಓ ಎಸ್ ನಂಃ**
**ಪಿ.ಡಬ್ಲ್ಯೂ -**
**ದಿನಾಂಕಃ 18.11.2025**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವಕೀಲರಿಂದಃ**

ಸುಳ್ಳು ದಾವೆಯನ್ನು ಹೂಡಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

ಅಪರ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನಾಯ್ಯಾಧೀಶರು, ಹೊಸದುರ್ಗ.